01.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

**ವಿಷಯ:** 2021-22ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ 01, 03 & 05ನೇ ಸೆಮಿಸ್ಟರ್ ಅವಧಿಗೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರ ಅಕ್ಟೋಬರ್-2021ರ ಮಾಹೆಯ 06 ದಿನಗಳು ಹಾಗೂ ನವೆಂಬರ್-2021ರ ಮಾಹೆಗೆ ಗೌರವಧನವನ್ನು ಪಾವತಿಸಲು ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರಸಂಖ್ಯೆ:ಇಡಿ/87ಡಿಸಿಇ/2021, ದಿನಾಂಕ:23.04.2021.
2. ಸರ್ಕಾರದ ಆದೇಶ ಸಂಖ್ಯೆ:ಇಡಿ/65/ಹೆಚ್‌ಪಿಸಿ/2021, ಬೆಂಗಳೂರು, ದಿನಾಂಕ:17.04.2021, 08.07.2021 & 01.09.2021.
3. ಈ ಕಛೇರಿಯ ಪತ್ರ ಸಂಖ್ಯೆ: ಕಾಶಿಇ/ನೇವಿ-1/ಅಉಆ/97/2021- 22, ದಿನಾಂಕ:26.10.2021.
4. ಈ ಕಛೇರಿಯ ಅನುದಾನ ಬಿಡುಗಡೆಯ ಆದೇಶ ಸಮ ಸಂಖ್ಯೆಯ ದಿನಾಂಕ:14.12.2021.

* * * *

ಪ್ರಸ್ತಾವನೆ:

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021-22ನೇ ಸಾಲಿನಲ್ಲಿ ಉಲ್ಲೇಖ(3)ರ ಈ ಕಛೇರಿಯ ಸುತ್ತೋಲೆಯಲ್ಲಿ 01, 03 & 05ನೇ ಸೆಮಿಸ್ಟರ್ ಅವಧಿಗೆ ಸಂಬಂಧಿಸಿದಂತೆ ಹೆಚ್ಚುವರಿ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಆದೇಶಿಸಲಾಗಿತ್ತು. 2021-22ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:2202-03-103-2-01(324)ರಡಿಯಲ್ಲಿ ಹಂಚಿಕೆಯಾಗಿದ್ದ ಅನುದಾನ ರೂ.112,08,03,000/-ಗಳು ಸರ್ಕಾರದಿಂದ ನಾಲ್ಕು ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ ರೂ.112,08,30,000/- (ನೂರ ಹನ್ನೆರೆಡು ಕೋಟಿ ಎಂಟು ಲಕ್ಷದ ಮೂವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಒಟ್ಟು ಅನುದಾನ ರೂ.85,05,35,778/-(ಎಂಭತ್ತೈದು ಕೋಟಿ ಐದು ಲಕ್ಷದ ಮೂವತ್ತೈದು ಸಾವಿರದ ಏಳು ನೂರ ಎಪ್ಪತ್ತೆಂಟು ರೂಪಾಯಿಗಳು ಮಾತ್ರ) ಗಳನ್ನು ಮೇ-2021 ರಿಂದ ಆಗಸ್ಟ್-2021ರ ಮಾಹೆವರೆಗೆ ಹಾಗೂ ಅಕ್ಟೋಬರ್-2021 ರ (ಈ ಕಛೇರಿಯ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಆದೇಶ ನೀಡಿದ ದಿನಾಂಕದಿಂದ) ಮಾಹೆಯ ದಿನಾಂಕ:26.10.2021 ರಿಂದ 31.10.2021ರವರೆಗೆ 06 ದಿನಗಳು, ನವೆಂಬರ್-2021 ಹಾಗೂ ಡಿಸಂಬರ್-2021ರ ಮಾಹೆಗೆ ಪೂರ್ಣ ಪ್ರಮಾಣದಲ್ಲಿ ಗೌರವಧನವನ್ನು ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಗೌರವಧನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಉಳಿಕೆ ಅನುದಾನ ರೂ.27,02,94,222/-(ಇಪ್ಪತ್ತೇಳು ಕೋಟಿ ಎರಡು ಲಕ್ಷದ ತೊಂಭತ್ತ ನಾಲ್ಕು ಸಾವಿರದ ಎರಡು ನೂರ ಇಪ್ಪತ್ತೆರೆಡು ರೂಪಾಯಿಗಳು ಮಾತ್ರ) ಗಳಲ್ಲಿ 2021-22ನೇ ಸಾಲಿಗೆ 1, 3 & 5ನೇ ಸೆಮಿಸ್ಟರ್ ಅವಧಿಗೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳ ಮಾಹಿತಿಯನ್ನು ತಡವಾಗಿ ಇ.ಎಂ.ಐ.ಎಸ್ ನಲ್ಲಿ ಅಪ್‌ಲೋಡ್ ಮಾಡಿರುವ ಕಾಲೇಜುಗಳ ಪ್ರಾಂಶುಪಾಲರುಳಿಗೆ ಅತಿಥಿ ಉಪನ್ಯಾಸಕರ ಗೌರವಧನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ:ಆಯವ್ಯಯ:ಅ.ಉ.ಸ:04:2021-22, ಬೆಂಗಳೂರು, ದಿನಾಂಕ:** 06-01-2022

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 2021-22ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ: 2202-03-103-2-01 (324) "ಇತರೇ ಸರ್ಕಾರಿ ಕಾಲೇಜುಗಳು" ರಡಿಯಲ್ಲಿ ಒದಗಿಸಲಾದ ರೂ.112,08,30,000/-ಗಳ ಅನುದಾನದಲ್ಲಿ ಉಳಿಕೆಯಾಗಿರುವ ರೂ.27,02,94,222/-(ಇಪ್ಪತ್ತೇಳು ಕೋಟಿ ಎರಡು ಲಕ್ಷದ ತೊಂಭತ್ತ ನಾಲ್ಕು ಸಾವಿರದ ಎರಡು ನೂರ ಇಪ್ಪತ್ತೆರೆಡು ರೂಪಾಯಿಗಳು ಮಾತ್ರ) ಗಳಲ್ಲಿ 01, 03 & 05ನೇ ಸೆಮಿಸ್ಟರ್ ಅವಧಿಗೆ ನೇಮಕಗೊಂಡು ತಡವಾಗಿ ಇ.ಎಂ.ಐ.ಎಸ್.ನಲ್ಲಿ ಅಪ್‌ಲೋಡ್ ಮಾಡಿರುವ ಕಾಲೇಜುಗಳಿಗೆ ಅಕ್ಟೋಬರ್-2021ರ ಮಾಹೆಯ 06 ದಿನಗಳು ಹಾಗೂ ನವೆಂಬರ್-2021ರ ಮಾಹೆಗೆ ಒಟ್ಟಾರೆ ರೂ.72,35,104/- (ಎಪ್ಪತ್ತೆರೆಡು ಲಕ್ಷದ ಮೂವತ್ತೈದು ಸಾವಿರದ ಒಂದನೂರ ನಾಲ್ಕು ರೂಪಾಯಿಗಳು ಮಾತ್ರ) ಗಳನ್ನು ಗೌರವಧನ ಪಾವತಿಗಾಗಿ ಈ ಕೆಳಕಂಡ ಕೋಷ್ಟಕದಲ್ಲಿರುವ ಕಾಲೇಜುಗಳಿಗೆ ಗೌರವಧನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

| ಕ್ರ. ಸಂ. | ಖಜಾನೆ-2ರ ಕೋಡ್ | ಕಾಲೇಜಿನ ಹೆಸರು | ಅಕ್ಟೋಬರ್-2021 (26.10.21 ರಿಂದ 31.10.21) | ನವೆಂಬರ್-2021 | ಡಿಸೆಂಬರ್-2021 | ಒಟ್ಟು ಅನುದಾನ |
|---|---|---|---|---|---|---|
| 1 | 181420 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ, ದೇವನಹಳ್ಳಿ | 43705 | 259556 | 271825 | 575086 |

...2

| | | | | | | |
|---|---|---|---|---|---|---|
| 2 | 182770 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೋಕಾಕ್ | 0 | 522442 | 804000 | 1326442 |
| 3 | 180990 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾವಳಗಿ | 25830 | 264799 | 236838 | 527467 |
| 4 | 183460 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುದ್ಗಲ್ | 15028 | 126736 | 149415 | 291179 |
| 5 | 182350 (yelburga) | ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಳಬಾಳ | 7418 | 72832 | 81000 | 161250 |
| 6 | 182050 | ಸರ್ಕಾರಿ ಕಲಾ ಕಾಲೇಜು, ಹಾಸನ | 74046 | 608465 | 598000 | 1280511 |
| 7 | 182240 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು | 0 | 70530 | 113250 | 183780 |
| 8 | 182490 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂತೆಬೆನ್ನೂರು | 26735 | 242515 | 253250 | 522500 |
| 9 | 182830 | **ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೂಡಲಗಿ** | 61407 | 399666 | 399666 | 860739 |
| 10 | 182470 | ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ | 57817 | 645530 | 802803 | 1506150 |
| | | **ಒಟ್ಟು ಅನುದಾನ ರೂ.** | 311986 | 3213071 | 3710047 | 7235104 |

**<u>ಷರತ್ತುಗಳು:</u>**

1. 2021-22ನೇ ಸಾಲಿಗೆ ಸರ್ಕಾರದ ಆದೇಶ/ಸುತ್ತೋಲೆಗಳನ್ವಯ 01, 03 & 05ನೇ ಸೆಮಿಸ್ಟರ್ ಅವಧಿಗೆ ಮಾತ್ರ ನೇಮಕಗೊಂಡು ಅಂತಿಮವಾಗಿ ಆಯ್ಕೆಗೊಂಡು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಯಿಂದ ಅನುಮೋದನೆಗೊಂಡಿರುವ (ನೇಮಕಾತಿ ದಿನಾಂಕ, ಅವಧಿ ಮತ್ತು ಹಂಚಿಕೆಯಾಗಿರುವ ಕಾರ್ಯಭಾರಕ್ಕೆ ತಕ್ಕಂತೆ) ಮಾತ್ರ ಗೌರವಧನವನ್ನು ಪಾವತಿಸತಕ್ಕದ್ದು ಹಾಗೂ ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಂದ ಅನುಮೋದನೆಗೊಂಡಿಲ್ಲದ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಹೆಚ್ಚುವರಿಯಾಗಿ ಪಾವತಿಸಿದ್ದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರುಗಳನ್ನು ಹೊಣೆಗಾರರನ್ನಾಗಿ ಮಾಡಿ ಸೂಕ್ತಕ್ರಮ ಕೈಗೊಳ್ಳಲಾಗುವುದು.

2. ಕಛೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮಾರ್ಗಸೂಚಿಯಂತೆ ವಿಭಾಗವನ್ನು (Section) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಭಾಗಿಸಿ ಅದರಂತೆ ಕಾರ್ಯಭಾರವನ್ನು ಲೆಕ್ಕ ಮಾಡಿ ಹೆಚ್ಚುವರಿ ಕಾರ್ಯಭಾರದಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಗರಿಷ್ಠ <u>8/10</u> ಗಂಟೆಗಳ ಕಾರ್ಯಭಾರವನ್ನು ಹಂಚಿಕೆ ಮಾಡಬೇಕು. ಅತಿಥಿ ಉಪನ್ಯಾಸಕರುಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದ <u>8/10</u> ಗಂಟೆಗಳ ಕಾರ್ಯಭಾರವನ್ನು ಇಬ್ಬರು ಅತಿಥಿ ಉಪನ್ಯಾಸಕರುಗಳಿಗೆ ಹಂಚಿಕೆ ಮಾಡುವುದಾಗಲಿ ಅಥವಾ ನಿಯಮ ಉಲ್ಲಂಘಿಸಿ ಹೆಚ್ಚುವರಿ ಕಾರ್ಯಭಾರ ಲೆಕ್ಕಚಾರ ಮಾಡಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಂಡು ಗೌರವಧನ ಪಾವತಿಸುವಂತಿಲ್ಲ. ಹೆಚ್ಚುವರಿ ಸಂಭಾವನೆ ನೀಡಿದ್ದಲ್ಲಿ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ವಿಷಯ/ವಿಭಾಗದ ಮುಖ್ಯಸ್ಥರನ್ನೆ ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

3. ಸರ್ಕಾರದ ಆದೇಶ ಸಂಖ್ಯೆ:ಇಡಿ:66:ಡಿಸಿಇ:2017:ಬೆಂಗಳೂರು, ದಿನಾಂಕ:04-04-2017ರನ್ವಯ ಎನ್.ಇ.ಟಿ/ ಎಸ್.ಎಲ್.ಇ.ಟಿ/ಪಿ.ಎಚ್‌ಡಿ ವಿದ್ಯಾರ್ಹತೆ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಮಾಸಿಕ ರೂ.13,000-00 ರಂತೆ ಹಾಗೂ ಸ್ನಾತ್ತಕೊತ್ತರ ಪದವಿ ಪಡೆದ (ಕನಿಷ್ಠ ಶೇಕಡ 55ರ ಅಂಕಗಳನ್ನು ಪಡೆದಿರುವ) ಅತಿಥಿ ಉಪನ್ಯಾಸಕರಿಗೆ ರೂ.11,000-00 ಗಳಂತೆ ಪಾವತಿಸಲು ಸೂಚಿಸಲಾಗಿದೆ.

4. ಪ್ರಾಂಶುಪಾಲರಿಂದ ಅಕ್ಟೋಬರ್-2021 ಮತ್ತು ನವೆಂಬರ್-2021ರ ಮಾಹೆಗಳಿಗೆ ಸ್ವೀಕೃತವಾದ ಪ್ರಸ್ತಾವನೆಯ ಆಧಾರದ ಮೇರೆಗೆ ಹಾಗೂ ಈ ಕಛೇರಿಯ ನೇಮಕಾತಿ ಮಾಡಿಕೊಳ್ಳಲು ಆದೇಶಿಸಿದ ದಿನಾಂಕದಿಂದ) ಅಕ್ಟೋಬರ್-2021ರ ಮಾಹೆಯ ದಿನಾಂಕ:26.10.2021 ರಿಂದ 31.10.2021ರ 6 ದಿನಗಳಿಗೆ ಮಾತ್ರ ಹಾಗೂ ನವೆಂಬರ್-2021ರ ಮಾಹೆಗೆ ಗೌರವಧನ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸಂಬಂಧಪಟ್ಟ ವಿಶ್ವವಿದ್ಯಾಲಯಗಳ 2021-22ನೇ ಸಾಲಿನ 01, 03 & 05ನೇ ಸೆಮಿಸ್ಟರ್ ಅವಧಿಗೆ ಶೈಕ್ಷಣಿಕ ವೇಳಾ ಪಟ್ಟಿಯನ್ವಯ ಕಾರ್ಯನಿರ್ವಹಿಸಿರುವ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ಪಾವತಿಸುವುದು.

..3

5. ಬಿಡುಗಡೆ ಮಾಡಲಾದ ಅನುದಾನವನ್ನು ವಿತರಿಸದೇ ಉಳಿಸಿಕೊಂಡು ಅತಿಥಿ ಉಪನ್ಯಾಸಕರುಗಳಿಂದ ದೂರು ಬಂದಲ್ಲಿ ಹಾಗೂ ಅನುದಾನ ವ್ಯಪಗತ (lapse) ವಾದಲ್ಲಿ ಪ್ರಾಂಶುಪಾಲರು ಮತ್ತು ಸಂಬಂಧಿಸಿದವರನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
6. ಬಿಡುಗಡೆಯಾಗಿರುವ ಅನುದಾನವನ್ನು ಬಳಸಿಕೊಂಡು ಈ ಕಛೇರಿಗೆ ನಿಗಧಿತ ನಮೂನೆಯಲ್ಲಿ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸಲು ಸೂಚಿಸಲಾಗಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಇ-ಆಫೀಸ್ ಮುಖಾಂತರ ಅನುಮೋದಿಸಲ್ಪಟ್ಟಿದೆ)**

ಕಾಲೇಜು ಶಿಕ್ಷಣ ನಿರ್ದೇಶಕರು

<u>ಇವರಿಗೆ:</u>

ಸಂಬಂಧಿಸಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

<u>ಪ್ರತಿಯನ್ನು:</u>

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ತಮ್ಮ ಕಛೇರಿ ವ್ಯಾಪ್ತಿಯ ಕಾಲೇಜುಗಳಲ್ಲಿ ನಿಗಧಿತ ಅವಧಿಯಲ್ಲಿ ಗೌರವಧನ ಪಾವತಿಸಲು ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.